## ಬೆಳದಿಂಗಳ ಸಂಗೀತ 219

12 ಡಿಸೆಂಬರ್ 2019

ಸ್ಯಾಕ್ಸೋಫೋನ್
ವಿದ್ವಾನ್ ಹರೀಶ್ ಪಾಂಡವ್

ವಯೋಲಿನ್
ಮಾಸ್ಟರ್ ಸುಮಂತ್ ಮಂಜುನಾಥ್

ಮೃದಂಗ
ವಿದ್ವಾನ್ ಸುನಾದ್ ಆನೂರು

## ಶ್ರೀ ಸುತ್ತೂರು ಮಠ, ಮೈಸೂರು ಶಾಖೆ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 218

12 ನವೆಂಬರ್ 2019 * ಮಂಗಳವಾರ * ಸಂಜೆ 6.00

ದಿವ್ಯ ಸಾನ್ನಿಧ್ಯ

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ



ಗಾಯನ
ಪಂ. ಸಿದ್ಧಾರ್ಥ ಬೆಳ್ಮಣ್ಣು



ಹಾರ್ಮೋನಿಯಂ
ಪಂ. ದೀಪಕ್ ನಾಗಣ್ಣವರ್



ತಬಲ
ಪಂ. ರೂಪಕ್ ಕಲ್ಲೂರಕರ್

**ಪಂ. ಸಿದ್ಧಾರ್ಥ ಬೆಳ್ಮಣ್ಣು** ಅಪರೂಪದ ಬಾಲಪ್ರತಿಭೆ. ಇವರ ಮಧುರ ಶಾರೀರವನ್ನು ಗಮನಿಸಿದ ಪೋಷಕರಾದ ಶ್ರೀಮತಿ ಉಷಾ ಮತ್ತು ಶ್ರೀ ಪ್ರಸಾದ್ ಬೆಳ್ಮಣ್ಣು ಇವರನ್ನು ಕರ್ನಾಟಕ ಸಂಗೀತ ಕಲಿಯಲು ಪ್ರೋತ್ಸಾಹಿಸಿದರು. ಆದರೆ, ಸಿದ್ಧಾರ್ಥರವರಿಗೆ ಹಿಂದೂಸ್ತಾನಿ ಸಂಗೀತದತ್ತ ಒಲವು ಇದ್ದ ಕಾರಣಕ್ಕಾಗಿ ಶ್ರೀ ಪಿ.ಆರ್. ಮಂಜುನಾಥ್‌ರವರ ಬಳಿ ಶಿಷ್ಯವೃತ್ತಿ ಆರಂಭಿಸಿದರು. ಚಿಕ್ಕ ವಯಸ್ಸಿನಲ್ಲೇ ಸಂಗೀತದಲ್ಲಿ ಅಸಾಧಾರಣವಾದ ಸಾಧನೆ ಮಾಡಿ ಪೂರ್ಣಪ್ರಮಾಣದ ಕಲಾವಿದರಾಗಿ ಹೊರಹೊಮ್ಮಿದರು. ಈ ಘಟ್ಟದಲ್ಲಿ ಇವರಿಗೆ ಖ್ಯಾತ ಹಿಂದೂಸ್ತಾನಿ ಗಾಯಕರಾದ ಗ್ವಾಲಿಯರ್ ಮತ್ತು ಕಿರಾನಾ ಘರಾನೆಗಳ ಅಧ್ವರ್ಯು ಪಂ. ವಿನಾಯಕ್ ತೊರವಿಯವರಲ್ಲಿ ಕಲಿಯುವ ಅವಕಾಶ ದೊರೆಯಿತು. ಕಳೆದ ಎಂಟು ವರ್ಷಗಳಿಂದ ಗುರುಕುಲ ಪದ್ಧತಿಯಲ್ಲಿ ಇವರ ಸಂಗೀತ ಸಾಧನೆ ನಡೆಯುತ್ತಿದೆ.

ತಮ್ಮ 19ನೆಯ ವಯಸ್ಸಿನಿಂದಲೇ ಸಾರ್ವಜನಿಕ ಕಚೇರಿಗಳನ್ನು ನೀಡುತ್ತಿರುವ ಈ ಅಪೂರ್ವ ಕಲಾವಿದ ಗುರುಗಳಾದ ವಿನಾಯಕ ತೊರವಿಯವರ ತಂಡದೊಂದಿಗೆ ವಿದೇಶಗಳಲ್ಲಿ ಸಂಗೀತವನ್ನು ಪ್ರಸ್ತುತಿಪಡಿಸಿ ಖ್ಯಾತರಾಗಿದ್ದಾರೆ. ಗ್ರ್ಯಾಮಿ ಪ್ರಶಸ್ತಿ ಪುರಸ್ಕೃತ ಶ್ರೀ ರಿಕ್ಕಿ ಕೇಜ್ ಅವರ ಜೊತೆಗೂಡಿ ಪರಿಸರ ಅರಿವು ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿದ್ದಾರೆ. ಹಲವಾರು ಜುಗಲಬಂದಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದಾರೆ. ದೇವರನಾಮ, ವಚನ, ಅಭಂಗ ಮೊದಲಾದ ಕಿರುಶಾಸ್ತ್ರೀಯ ಸಂಗೀತದಲ್ಲೂ ಸಿದ್ಧಹಸ್ತರಾಗಿದ್ದಾರೆ.

ಹಾರ್ಮೋನಿಯಂ ಸಹಕಾರ ನೀಡುತ್ತಿರುವ **ಪಂ. ದೀಪಕ್ ನಾಗಣ್ಣವರ್**ರವರು ಧಾರವಾಡದ ಖ್ಯಾತ ಹಾರ್ಮೋನಿಯಂ ಮಾಂತ್ರಿಕ ಪಂ. ರವೀಂದ್ರ ಕಾಟೋಟಿಯವರ ಶಿಷ್ಯರು. ಕರ್ನಾಟಕ ಮತ್ತು ಅಕ್ಕಪಕ್ಕದ ರಾಜ್ಯಗಳ ಹಲವಾರು ಹಿರಿಯ ಕಲಾವಿದರಿಗೆ ಹಾರ್ಮೋನಿಯಂ ಸಹಕಾರ ನೀಡಿ ಹೆಸರು ಮಾಡಿದ್ದಾರೆ.

**ಪಂ. ರೂಪಕ್ ಕಲ್ಲೂರಕರ್** ತಬಲ ಸಾಥ್ ನೀಡುತ್ತಿದ್ದಾರೆ. ತಂದೆ ಪಂ. ರಾಜಗೋಪಾಲ್ ಕಲ್ಲೂರ್‌ಕರ್‌ರವರಲ್ಲಿ ಶಿಷ್ಯವೃತ್ತಿ ಮಾಡಿದ್ದಾರೆ. ಬಾಲ್ಯದಿಂದಲೇ ಸಂಗೀತಾಸಕ್ತಿ ಹೊಂದಿದ್ದರು. ಇಂದು ಅತ್ಯಂತ ಬೇಡಿಕೆಯಲ್ಲಿರುವ ಕಲಾವಿದರು. ಖ್ಯಾತ ಟಿ.ವಿ. ವಾಹಿನಿಗಳಲ್ಲಿಯೂ ಕಾರ್ಯಕ್ರಮ ನೀಡಿರುತ್ತಾರೆ.

ಫೋನ್: 0821–2548220, 2548221 * ಫ್ಯಾಕ್ಸ್: 0821–2548219 * ಇಮೇಲ್: jssashram@yahoo.com